ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 05-12-1994.

# *ವರ್ತಮಾನ ಸಮಯದ ಅವಶ್ಯಕತೆ - ಬೇಹದ್ದಿನ ವೈರಾಗ್ಯ ವೃತ್ತಿಯ ವಾಯುಮಂಡಲವನ್ನು ತಯಾರಿ ಮಾಡುವುದು.*

(वर्तमान समय की आवश्यकता - बेहद के वैराग्य वृत्ति का वायुमण्डल बनाना)

ಇಂದು ಸ್ನೇಹದ ಸಾಗರನಾದ ತಂದೆಯು ಸ್ನೇಹದಲ್ಲಿ ಮುಳುಗಿರುವ ತನ್ನ ಸ್ನೇಹಿ ಮಕ್ಕಳನ್ನು ನೋಡುತ್ತಿದ್ದಾರೆ. ಈ ಈಶ್ವರನ ಸ್ನೇಹವು ತಾವು ಮಕ್ಕಳಿಗಲ್ಲದೆ ಮತ್ತಾರಿಗೂ ಪ್ರಾಪ್ತಿಯಾಗುವುದಿಲ್ಲ. ತಮ್ಮೆಲ್ಲರಿಗೂ ಇದು ವಿಶೇಷ ಪ್ರಾಪ್ತಿಯಾಗಿದೆ. ಪ್ರಾಪ್ತಿಯು ಎಲ್ಲಾ ಮಕ್ಕಳಿಗೂ ಇದೆ ಆದರೆ ಮೊದಲ ಹಂತ- ಪ್ರಾಪ್ತಿಯಾಗುವುದು. ಎರಡನೇ ಹಂತ- ಪ್ರಾಪ್ತಿಯ ಅನುಭವದಲ್ಲಿ ಮುಳುಗಿಬಿಡುವುದು. ಮೊದಲ ವಿಷಯ ಪ್ರಾಪ್ತಿಯ ನಶೆಯಲ್ಲಿ ಎಲ್ಲರೂ ಹೇಳುತ್ತೀರಿ- ನಮಗೆ ತಂದೆಯ ಪ್ರೀತಿ ಸಿಕ್ಕಿದೆ. ತಂದೆಯು ಸಿಕ್ಕರು ಅರ್ಥಾತ್ ಪ್ರೀತಿ ಸಿಕ್ಕಿತು. ಎಲ್ಲರ ಮುಖದಿಂದ 'ನನ್ನ ಬಾಬಾ' ಎನ್ನುವುದೇ ಬರುತ್ತದೆ. ಹಾಗಾದರೆ ಮೊದಲ ಹಂತದಲ್ಲಿ ಪ್ರಾಪ್ತಿಯಂತೂ ಎಲ್ಲರಿಗೂ ಆಗಿದೆ ಆದರೆ ಅನುಭೂತಿಯಲ್ಲಿ ಸದಾ ಮುಳುಗಿರುವುದರಲ್ಲಿ ನಂಬರ್‌ವಾರ್ ಇದೆ. ಯಾರು ಪರಮಾತ್ಮನ ಪ್ರೀತಿಯಲ್ಲಿ ಮುಳುಗಿರುತ್ತಾರೆಯೋ ಅವರನ್ನು ಈ ಪ್ರೀತಿಯಿಂದ ದೂರ ಮಾಡಲು ಸಾಧ್ಯವೇ ಇಲ್ಲ. ಪರಮಾತ್ಮನ ಪ್ರೀತಿಯಲ್ಲಿ ಮುಳುಗಿರುವ ಆತ್ಮನ ಹೊಳಪು ಹಾಗೂ ನಶೆ, ಅನುಭೂತಿಯ ಕಿರಣಗಳು ಎಷ್ಟು ಶಕ್ತಿಶಾಲಿಯಾಗಿರುತ್ತವೆ ಎಂದರೆ ಯಾರೇ ಅವರ ಸಮೀಪ ಬರುವುದಂತು ದೂರದ ಮಾತು. ಆದರೆ ಕಣ್ಣೆತ್ತಿಯೂ ನೋಡಲು ಸಾಧ್ಯವಿಲ್ಲ. ಇಂತಹ ಅನುಭೂತಿಯು ಸದಾ ಇದ್ದರೆ ಎಂದಿಗೂ ಯಾವುದೇ ಪ್ರಕಾರದ ಪರಿಶ್ರಮವಾಗುವುದಿಲ್ಲ. ಈಗ ಯೋಗವನ್ನು ಮಾಡುತ್ತಾ-ಮಾಡುತ್ತಾ ಯುದ್ಧ ಮಾಡಬೇಕಾಗುತ್ತದೆ. ಕುಳಿತುಕೊಳ್ಳುವುದು ಯೋಗದಲ್ಲಿ ಅದರೆ ಅನುಭೂತಿಯಲ್ಲಿ ಮುಳುಗದೇ ಇರುವ ಕಾರಣದಿಂದ ಕೆಲವೊಮ್ಮೆ ಯೋಗ, ಕೆಲವೊಮ್ಮೆ ಯುದ್ಧ, ಎರಡೂ ನಡೆಯುತ್ತಿರುತ್ತದೆ. ನಾನು ತಂದೆಯ ಮಗು ಎನ್ನುವುದನ್ನು ಮತ್ತೆ-ಮತ್ತೆ ಸ್ಮೃತಿಯಲ್ಲಿ ತಂದುಕೊಳ್ಳಬೇಕಾಗುತ್ತದೆ. ಹಾಗಾದರೆ ಮತ್ತೆ-ಮತ್ತೆ ಸ್ಮೃತಿಯಲ್ಲಿ ತಂದುಕೊಳ್ಳುವುದು ವಿಸ್ಮೃತಿಯಾಗಿದೆ. ಆದ್ದರಿಂದ ಸ್ಮೃತಿಯಲ್ಲಿ ತಂದುಕೊಳ್ಳುವಿರಲ್ಲವೇ? ಇದರಲ್ಲಿ ಹೌದು-ಇಲ್ಲ. ಸ್ಮೃತಿ-ವಿಸ್ಮೃತಿಯ ಈ ಯುದ್ಧವು ಲವಲೀನತೆಯ ಅನುಭೂತಿ ಮಾಡುವುದಕ್ಕೆ ಬಿಟ್ಟುಕೊಡುವುದಿಲ್ಲ. ವರ್ತಮಾನ ಸಮಯದಲ್ಲಿ ಮಕ್ಕಳಿಗೆ ಯುದ್ಧ ಅಥವಾ ಪರಿಶ್ರಮವೇನೆಂದರೆ ಅದು ವ್ಯರ್ಥ ಮತ್ತು ಸಮರ್ಥದ ನಡುವೆ ಹೆಚ್ಚಾಗಿ ಯುದ್ಧದ್ದಾಗಿರುತ್ತದೆ. ಕೆಲವು ಮಕ್ಕಳಲ್ಲಿ ವ್ಯರ್ಥ ನೋಡುವಂತಹ ಸಂಸ್ಕಾರವು ಸ್ವಾಭಾವಿಕ ಸ್ವಭಾವವಾಗಿಬಿಟ್ಟಿದೆ. ಕೆಲವರಲ್ಲಿ ಕೇಳುವ, ಕೆಲವರಲ್ಲಿ ವ್ಯರ್ಥದ ವರ್ಣನೆ ಮಾಡುವ, ಕೆಲವರಲ್ಲಿ ಚಿಂತನೆ ಮಾಡುವಂತಹ ಸ್ವಭಾವವು ಸ್ವಾಭಾವಿಕವಾಗಿಬಿಟ್ಟಿದೆ. ನಾವು ಹೀಗೆ ಮಾಡುತ್ತೇವೆ ಎಂಬುದನ್ನೂ ಅವರು ತಿಳಿದುಕೊಳ್ಳುವುದೇ ಇಲ್ಲ. ಒಂದುವೇಳೆ ಸೂಚನೆ ಕೊಟ್ಟರೂ ಮಾಯೆಯ ಬುದ್ಧಿವಂತಿಕೆಯ ಕಾರಣ ಅವರು ತನ್ನನ್ನು ಬಹಳ

ಬುದ್ಧಿವಂತರೆಂದು ತಿಳಿಯುತ್ತಾರೆ. ಇಲ್ಲದಿದ್ದರೆ ಮಾಯೆಯ ಬುದ್ಧಿವಂತರಾಗುತ್ತಾರೆ ಅಥವಾ ಇದಂತೂ ನಡೆಯುತ್ತಲೇ ಇರುತ್ತದೆ. ಇದಂತೂ ಆಗುತ್ತಿರುತ್ತದೆ. ಎಂಬ ಹುಡುಗಾಟಿಕೆಯಲ್ಲಿ ಬಂದುಬಿಡುತ್ತಾರೆ. ಮಾಯೆಯ ಬುದ್ಧಿವಂತಿಕೆಯಿಂದ ತಪ್ಪಿನಲ್ಲಿಯೂ ತನ್ನನ್ನು ಸರಿಯೆಂದು ತಿಳಿಯುತ್ತಾರೆ. ಅಲ್ಲಿ ಆಗುವುದು ಮಾಯೆಯ ಬುದ್ದಿವಂತಿಕೆ ಆದರೆ ತಿಳಿಯುತ್ತಾರೆ- ನನ್ನಂತಹ ಜ್ಞಾನಿ, ನನ್ನಂತಹ ಯೋಗಿ, ನನ್ನಂತಹ ಸೇವಾಧಾರಿ ಮತ್ಯಾರೂ ಇಲ್ಲ ಏಕೆಂದರೆ ಆ ಸಮಯದಲ್ಲಿ ಮಾಯೆಯ ನೆರಳು ಮನಸ್ಸು ಹಾಗೂ ಬುದ್ದಿಯನ್ನು ವಶ ಮಾಡಿಕೊಂಡುಬಿಡುತ್ತದೆ, ಅದರಿಂದ ಯಥಾರ್ಥ ನಿರ್ಣಯ ತೆಗೆದುಕೊಳ್ಳುವುದಕ್ಕೂ ಸಾಧ್ಯವಿಲ್ಲ. ಮಾಯಾವೀ ಯೋಗಿ ಅಥವಾ ಮಾಯಾವಿ ಜ್ಞಾನಿ ಬುದ್ಧಿವಂತಿಕೆಯು ಈಶ್ವರನ ತಿಳುವಳಿಕೆಯಿಂದ ದೂರ ಮಾಡಿಸಿಬಿಡುತ್ತದೆ. ಮಾಯೆಯ ಬುದ್ಧಿವಂತಿಕೆಯೇನೂ ಕಡಿಮೆಯಲ್ಲ, ಮಾಯೆಯೊಂದಿಗೆ ಯೋಗವನ್ನಿಡುವವರೂ ಸಹ ಅಚಲ, ಸ್ಥಿರ ಯೋಗಿಗಳಾಗಿರುತಾರೆ ಆದ್ದರಿಂದ ಅಂತರವು ತಿಳಿಯುವುದಿಲ್ಲ. ಆ ಸಮಯದಲ್ಲಿ ಮಾತಿನ ನಶೆಯೂ ಸಹ ಹೇಗಿರುತ್ತದೆ! ಎನ್ನುವುದು ಎಲ್ಲರಿಗೂ ಗೊತ್ತಿದೆ ಅಲ್ಲವೆ. ಆದ್ದರಿಂದ ಬಾಪ್‌ದಾದಾರವರು ಸದಾ ಮಕ್ಕಳಿಗೆ ಹೇಳುತ್ತಾರೆ- ಪ್ರಾಪ್ತಿಗಳ ಅನುಭೂತಿಯ ಸಾಗರನಲ್ಲಿ ಸಮಾವೇಶವಾಗಿ ಇರಬೇಕು. ಸಾಗರನಲ್ಲಿ ಸಮಾವೇಶವಾಗುವುದು ಎಂದರೆ ಸಾಗರನ ಸಮಾನ ಬೇಹದ್ದಿನ ಪ್ರಾಪ್ತಿ ಸ್ವರೂಪರಾಗಿ ಕರ್ಮದಲ್ಲಿ ಬರುವುದಾಗಿದೆ.

ಬಾಪ್‌ದಾದಾರವರು ನಾಲ್ಕೂ ಕಡೆಯಲ್ಲಿರುವ ಮಕ್ಕಳ ದಿನಚರಿಯನ್ನು ಪರಿಶೀಲಿಸಿದರು ಏನು ನೋಡಿದರು? ಸಮಯದ ಸಮೀಪತೆಯ ಅನುಸಾರ ವರ್ತಮಾನದ ವಾಯುಮಂಡಲದಲ್ಲಿ ಬೇಹದ್ದಿನ ವೈರಾಗ್ಯವು ಪ್ರತ್ಯಕ್ಷ ಸ್ವರೂಪದಲ್ಲಾಗುವ ಅವಶ್ಯಕತೆಯಿದೆ. ಇದರ ಬಗ್ಗೆ ವರ್ಣನೆಯನ್ನೂ ಮಾಡುತ್ತೀರಿ. ಹಲವಾರು ಜ್ಞಾನಬಿಂದುಗಳನ್ನು ತೆಗೆಯುತ್ತೀರಿ. ಭಾಷಣವನ್ನೂ ಬಹಳ ಚೆನ್ನಾಗಿಯೇ ಮಾಡುತ್ತೀರಿ ಎಲ್ಲರಬಳಿ ಜ್ಞಾನಬಿಂದುಗಳಿವೆ ಅಲ್ಲವೇ? ಅದರ ವರ್ಣನೆ ಮಾಡುವುದು ಅಥವಾ ಚಿಂತನೆ ಮಾಡುವುದರಲ್ಲಿ ಮೆಜಾರಿಟಿ ಉತ್ತೀರ್ಣರಾಗಿದ್ದಾರೆ. ಈ ಚಿಕ್ಕ-ಚಿಕ್ಕ ಕುಮಾರಿಯರಿಗೂ ಭಾಷಣ ತಯಾರಿ ಮಾಡಿಕೊಟ್ಟರೆ ಭಾಷಣ ಮಾಡಿಬಿಡುವರು. ಯಥಾರ್ಥ ವೈರಾಗ್ಯ ವೃತ್ತಿಯ ಸಹಜ ಅರ್ಥವು ಇದೇ ಆಗಿದೆ- ಆತ್ಮರ ಸಂಪರ್ಕದಲ್ಲಾದರೂ ಬರಬಹುದು, ಸಾಧನಗಳ ಸಂಬಂಧದಲ್ಲಾದರೂ ಬರಬಹುದು, ಸೇವೆಯ ಅವಕಾಶ ಸಿಕ್ಕಾಗ ಚಾನ್ಸ್‌ಲರ್ ಆಗುವ ಭಾಗ್ಯವೇ ಸಿಗಲಿ ಆದರೆ ಸರ್ವರ ಸಂಬಂಧ ಸಂಪರ್ಕದಲ್ಲಿ ಎಷ್ಟು ಅತೀತವಾಗಿರುತ್ತೀರೋ ಅಷ್ಟು ಪ್ರಿಯರಾಗಬೇಕು- ಇದರ ಸಮತೋಲನವಿರಲಿ, ಆಗುತ್ತದೆಯೇ? ಕೆಲವೊಮ್ಮೆ ಅತೀತವಾಗುವುದರಲ್ಲಿ ಶೇಕಡಾವಾರು ಹೆಚ್ಚಾಗಿಬಿಡುತ್ತದೆ. ಮತ್ತೆ ಕೆಲವೊಮ್ಮೆ ಪ್ರಿಯರಾಗುವುದರಲ್ಲಿ ಶೇಕಡಾವಾರು ಹೆಚ್ಚಾಗಿಬಿಡುತ್ತದೆ. ಪ್ರಿಯರಾಗುವುದರ ಅರ್ಥವಾಗಿದೆ-ನಿಮಿತ್ತ ಭಾವ, ನಿರಹಂಕಾರಿ ಆಗಿರುವುದು ಆದರೆ ಇದರ ಬದಲು ನನ್ನದೆನ್ನುವ ಪರಿವೆ ಬಂದುಬಿಡುತ್ತದೆ. ಇದು ನನ್ನದೇ ಕಾರ್ಯವಾಗಿದೆ. ನನ್ನದೇ ಸ್ಥಾನವಾಗಿದೆ. ಭಾಗ್ಯದ ಅನುಸಾರ ನನಗೇ ಸರ್ವ ಸಾಧನಗಳೂ ಸಿಕ್ಕಿದೆ. ಇಷ್ಟು ಪರಿಶ್ರಮದಿಂದ ನಾನು ಈ ಸಾಧನ, ಸ್ಥಾನ ಅಥವಾ ಸೇವೆ ಅಥವಾ ಸೇವಾ ಜೊತೆಗಾರರನ್ನು(ವಿದ್ಯಾರ್ಥಿಗಳೂ ಜೊತೆಗಾರರಾಗಿದ್ದಾರೆ) ತಯಾರು ಮಾಡಿದ್ದೇವೆ. ಇವರು ನನ್ನವರು, ನನ್ನ ಪರಿಶ್ರಮಕ್ಕೆ ಬೆಲೆಯಿಲ್ಲವೇ? ಇದು ನಿಮಿತ್ತ ಭಾವ ಮತ್ತು ನನ್ನ ಭಾವದಲ್ಲಿ ಅಂತರವಿದೆಯೇ ಅಥವಾ ಒಂದೇ ಆಗಿದೆಯೇ? ಈ ನನ್ನತನವು ರಾಯಲ್ ರೂಪದಲ್ಲಿ ಹೆಚ್ಚಾಗುತ್ತಿದೆ. ನನ್ನತನ ಈ ರಾಯಲ್ ಭಾಷೆ, ರಾಯಲ್ ಸಂಕಲ್ಪವನ್ನು ತಂದೆಯೊಂದಿಗೆ ಆತ್ಮಿಕ ವಾರ್ತಾಲಾಪ ಮಾಡುವಾಗಲೂ

ಬಾಪ್‌ದಾದಾರವರು ಬಹಳ ಆಲಿಸುತ್ತಿರುತ್ತಾರೆ. ಬಹಳ ಪ್ರೀತಿಯಿಂದ ತಂದೆ ಹಾಗೂ ನಿಮಿತ್ತ ಆತ್ಮರನ್ನು ಒಪ್ಪಿಸುವ ಅಥವಾ ಒಪ್ಪಿಸುವುದಕ್ಕಾಗಿ ಬರುತ್ತಾರೆ- ಬಾಬಾ, ತಾವೇ ಇದರಲ್ಲಿ ನನಗೆ ಸಹಯೋಗ ಕೊಡಬೇಕು. ತಾವೇನು ತಿಳಿಯುತ್ತೀರಿ- ಇದು ನನ್ನ ಕಾರ್ಯವಲ್ಲವೇ. ನನ್ನ ಜವಾಬ್ದಾರಿಯಲ್ಲವೇ, ನನ್ನ ಅಧಿಕಾರ ನನಗೇ ಸಿಗಬೇಕು. ತಂದೆಯವರಿಗೂ ತಿಳುವಳಿಕೆ ಕೊಡಲು ಬಹಳ ಬುದ್ಧಿವಂತಿಕೆ ಉಪಯೋಗಿಸುತ್ತಾರೆ. ಬಾಪ್‌ದಾದಾರವರು ಮುಗುಳ್ನಗುತ್ತಾ ಇರುತ್ತಾರೆ. ನಿಮಿತ್ತರಾಗಿದ್ದೇವೆ, ಏನು ಸಿಕ್ಕಿದೆಯೋ, ಹೇಗೆ ಸಿಕ್ಕಿದೆಯೋ. ಎಲ್ಲಿ ಕೂರಿಸುವರೋ, ಏನನ್ನು ಸೇವನೆ ಮಾಡಿಸುವರೋ, ಏನು ಮಾಡಿಸುವರೋ ಅದನ್ನೇ ಮಾಡುತ್ತೇವೆ- ಇದು ಎಲ್ಲರ ಮೊಟ್ಟಮೊದಲ ಪ್ರತಿಜ್ಞೆಯಾಗಿದೆ. ಪ್ರತಿಜ್ಞೆ ಇದೆಯಲ್ಲವೇ? ಇದೇ ಪ್ರತಿಜ್ಞೆಯಿದೆಯೇ ಅಥವಾ ಕೇವಲ ಆಹಾರ ಸೇವನೆಗಾಗಿ ಇದೆಯೇ? ನನ್ನದೆಂಬ ಭಾವದ ವೈರಾಗ್ಯವೇ ಬೇಹದ್ದಿನ ವೈರಾಗ್ಯವಾಗಿದೆ. ಹೊಸ-ಹೊಸ ಪ್ರಕಾರದ ನನ್ನತನವು ಇನ್ನೂ ಇಮರ್ಜ್(ಸ್ಮೃತಿಸ್ವರೂಪ) ಆಗುತ್ತಿದೆ. ವರ್ತಮಾನ ಸಮಯದಲ್ಲಿ ಮಾಯೆಯು ಹೊಸ-ಹೊಸ ಪ್ರಕಾರದ ನನ್ನದೆಂಬ ನೆರಳು ಹಾಕುತ್ತಿದೆ. ಆದ್ದರಿಂದ ಸಮಯದ ಸಮೀಪತೆಯು ಪ್ರತ್ಯಕ್ಷ ರೂಪದಲ್ಲಿ ಬರುತ್ತಿಲ್ಲ. ಜ್ಞಾನಿ ಅಥವಾ ಅಜ್ಞಾನಿಯಾಗಿರಬಹುದು. ಇಬ್ಬರಿಗೂ ಗೊತ್ತಿದೆ ಮತ್ತು ಹೇಳುತ್ತಾ ಇರುತ್ತಾರೆ- ಪ್ರಪಂಚದ ಸ್ಥಿತಿಗತಿಯು ಬಹಳ ಕೆಟ್ಟದಾಗಿದೆ. ಈ ಪ್ರಪಂಚವು ಎಲ್ಲಿಯವರೆಗೆ ನಡೆಯುತ್ತದೆ. ಹೇಗೆ ನಡೆಯುತ್ತದೆ? ಆದರೆ ಇಷ್ಟಾದರೂ ಪ್ರಪಂಚವು ಸಾಗುತ್ತಿದೆ. ಸಮಯದ ಸಮೀಪತೆಯ ಆಧಾರವಾಗಿದೆ- ಬೇಹದ್ದಿನ ವೈರಾಗ್ಯ ವೃತ್ತಿ. ಬಾಪ್‌ದಾದಾರವರು ಪರಿಶೀಲನೆ ಮಾಡಿದರು- ಬೇಹದ್ದಿನ ವೈರಾಗ್ಯ ವೃತ್ತಿಗೆ ಬದಲಾಗಿ ಹೊಸ-ಹೊಸ ಪ್ರಕಾರದ ಚಿಕ್ಕ-ಚಿಕ್ಕ ಸೆಳೆತಗಳ ವಿಸ್ತಾರವು ಬಹಳಷ್ಟು ದೊಡ್ಡದಾಗಿದೆ. ಈ ವಿಸ್ತಾರವೇ ಸಾರವನ್ನು ಗುಪ್ತ ಮಾಡಿಬಿಟ್ಟಿದೆ. ಈಗೇನು ಮಾಡಬೇಕೆಂದು ತಿಳಿಯಿತೆ?

ಈ ಸೆಳೆತವು ಬಹಳ ರುಚಿಯೆನಿಸುತ್ತದೆ. ಒಂದೆರಡು ಬಾರಿ ರುಚಿ ನೋಡಿದರೆ ಅದು ಸೆಳೆಯುತ್ತಿರುತ್ತದೆ. ಸೇವೆ ಮಾಡುತ್ತಿದ್ದೀರಿ ಬಹಳ ಒಳ್ಳೆಯದು ಆದರೆ ತಮ್ಮ ಪರಿಶೀಲನೆ ಮಾಡಿಕೊಳ್ಳಿರಿ- ನನ್ನಲ್ಲಿ ನಿಮಿತ್ತ ಭಾವವಿದೆಯೇ ಅಥವಾ ಸೆಳೆತದ ಭಾವವಿದೆಯೇ? "ಬಾಬಾ-ಬಾಬಾ' ಎನ್ನುವುದಕ್ಕೆ ಬದಲು 'ನನ್ನದು- ನನ್ನದು' ಎನ್ನುವುದು ಬರುತ್ತಿಲ್ಲವಲ್ಲ? ನಿನ್ನದೆಂದು ಒಪ್ಪುತ್ತೀರಿ ಮತ್ತು ನನ್ನದಾಗಿಬಿಡುತ್ತದೆ. ಹಾಗಾದರೆ ಈಗ ಏನು ಮಾಡುವಿರಿ? ನನ್ನದು-ನನ್ನದು ಎನ್ನುವುದೇ ಪ್ರಿಯವಾಗಿದೆಯೇ? ಬಾಪ್‌ದಾದಾರವರು ಈ ಮೊದಲೇ ತಿಳಿಸಿದ್ದಾರೆ- ಒಂದು ಬಹಳ ದೊಡ್ಡ ತಪ್ಪನ್ನು ಮಾಡುತ್ತಾರೆ ಅಥವಾ ನಡೆಯುತ್ತಾ ನಡೆಯುತ್ತಾ ಆಗಿಬಿಡುತ್ತದೆ. ಮಾಡಲು ಬಯಸುವುದಿಲ್ಲ ಆದರೆ ಆಗಿಬಿಡುತ್ತದೆ, ಅದೇನು? ಇನ್ನೊಬ್ಬರ ನ್ಯಾಯಾಧೀಶರಾಗಿಬಿಡುತ್ತಾರೆ ಮತ್ತು ತನಗಾಗಿ ವಕೀಲರಾಗಿಬಿಡುತ್ತಾರೆ. ಆಗಬೇಕಾಗಿರುವುದು ನ್ಯಾಯಾಧೀಶ ಮತ್ತು ಅದಾಗುವುದು ಇನ್ನೊಬ್ಬರಿಗಾಗಿ ಇದನ್ನು ಮಾಡಬಾರದು. ಇವರು ಬದಲಾಗಬೇಕು ಎಂದು ಅನ್ಯರಿಗಾಗಿ ನ್ಯಾಯಾಧೀಶರಾಗಿಬಿಡುತ್ತಾರೆ. ಮತ್ತು ತನಗಾಗಿ ತಿಳಿಯುತ್ತಾರೆ- ಈ ಮಾತು ಸಂಪೂರ್ಣವಾಗಿ ಸರಿಯಾಗಿದೆ ನಾನೇನು ಹೇಳುತ್ತೇನೆಯೋ ಅದು ಸರಿಯಾಗಿದೆ. ಇವರು ಹೀಗಿದ್ದಾರೆ. ಇವರು ಹಾಗಿದ್ದಾರೆ ವಕೀಲರೂ ಸಹ ಸಿದ್ಧ ಮಾಡುತ್ತಾರಲ್ಲವೆ, ಸತ್ಯವನ್ನು ಅಸತ್ಯ, ಅಸತ್ಯವನ್ನು ಸತ್ಯ ಸಿದ್ಧ ಮಾಡುತ್ತಾರೆ. ಮತ್ತು ವಕೀಲರಿಗೆ ಪ್ರಮಾಣ ಕೊಡುವುದಕ್ಕೆ ಎಷ್ಟು ಬರುತ್ತದೆಯೋ ಅಷ್ಟು ಮತ್ತಾರಿಗೂ ಬರುವುದಿಲ್ಲ. ತಮಗಾಗಿ ನ್ಯಾಯಾಧೀಶನಾಗಬೇಕು. ಇದರಲ್ಲಿ ತಪ್ಪಾಗಿಬಿಡುತ್ತದೆ.

ಇನ್ನೊಬ್ಬರಿಗಾಗಿ ರಿಮಾರ್ಕ್ ಕೊಡುವುದು ಬಹಳ ಸಹಜವಿದೆ. ಆದರೆ ತಮ್ಮನ್ನು ಪರಿವರ್ತನೆ ಮಾಡಿಕೊಳ್ಳಬೇಕು. ಸ್ಲೋಗನ್ ಸಹ ಇದೆ - ಸ್ವ-ಪರಿವರ್ತನೆಯಿಂದ ವಿಶ್ವ-ಪರಿವರ್ತನೆ", ಮೊದಲು ಸ್ವಯಂ ಪರಿವರ್ತನೆಯಾಗಬೇಕು. ಯಾವ ಚಾರ್ಟನ್ನು ನೋಡಿದರೆಂದು ಕೇಳಿಸಿಕೊಂಡಿರಾ.

ಬಾಪ್‌ದಾದಾರವರೂ ಸಹ ಮಾಯೆಯ ಚಲನೆಯನ್ನು ನೋಡುತ್ತಾ ಮುಗುಳ್ನಗುತ್ತಾ ಇರುತ್ತಾರೆ- ಮಾಯೆಯು ಎಷ್ಟೊಂದು ಚತುರನಾಗಿದೆ! ಮಾಸ್ಟರ್ ಸರ್ವಶಕ್ತಿವಂತ ಆತ್ಮರನ್ನೇ ತನ್ನವರನ್ನಾಗಿ ಮಾಡಿಕೊಂಡುಬಿಡುತ್ತದೆ. ಹಾಗಾಗಿ ಈಗ ಏನಿರಬೇಕು? ಬೇಹದ್ದಿನ ವೈರಾಗ್ಯ ವೃತ್ತಿಯ ವಾಯುಮಂಡಲವನ್ನು ತಯಾರು ಮಾಡಿರಿ. ಹೇಗೆ ಸೇವಾ ವಾಯುಮಂಡಲವನ್ನು ತಯಾರು ಮಾಡುತ್ತೀರಲ್ಲವೆ, ಕಾರ್ಯಕ್ರಮಗಳನ್ನು ಮಾಡುತ್ತೀರಿ ಕೇವಲ ಬುದ್ಧಿಯವರೆಗಷ್ಟೇ ಈ ವೃತ್ತಿಯಲ್ಲ, ಹೃದಯದವರೆಗೂ ತಲುಪಲಿ ಎಲ್ಲರ ಬುದ್ಧಿಯಲ್ಲಂತು ಆಗಬೇಕು. ಮಾಡಬೇಕು ಎನ್ನುವುದಿದೆ ಆದರೆ ಹೃದಯದಲ್ಲಿ ಈ ಅಲೆಗಳು ಉತ್ಪನ್ನವಾಗಿಬಿಡಬೇಕು- ಇದರ ಅವಶ್ಯಕತೆಯಿದೆ. ತಿಳಿಯಿತೆ? ಎಲ್ಲರೂ ಬಹಳ ಚೆನ್ನಾಗಿ ತಿಳಿದುಕೊಂಡಿದ್ದೀರಾ? ಅಥವಾ ಈಗ ಅರ್ಥವಾಯಿತು ನಂತರ ಇಲ್ಲಿಂದ ಎದ್ದು ಹೋದ ಮೇಲೆ ಇದು ಹೇಗಾಗುತ್ತದೆ. ಇದನ್ನು ಮಾಡುವುದು ಕಷ್ಟ, ಹೇಳುವುದು ಮತ್ತು ಕೇಳುವುದು ಸಹಜ, ಮಾಡುವುದು ಕಷ್ಟವೆಂದು ಯೋಚಿಸುತ್ತೀರಾ! ಈಗ ಈ ರೀತಿ ಹೇಳುವುದಿಲ್ಲವಲ್ಲವೇ? ಸ್ನೇಹದಿಂದ ತಾವೂ ತಲುಪಿದ್ದೀರಿ ಮತ್ತು ಬಾಪ್‌ದಾದಾರವರೂ ತಲುಪಿದ್ದಾರೆ. ನೋಡಿ ಸ್ನೇಹದಲ್ಲಿ ಎಷ್ಟೊಂದು ಶಕ್ತಿಯಿದೆ! ಸ್ನೇಹವು ಅವ್ಯಕ್ತನನ್ನೂ ವ್ಯಕ್ತಕ್ಕೆ ಕರೆತರುತ್ತದೆ. ತಮ್ಮೆಲ್ಲರನೂ ಮಧುಬನಕ್ಕೆ ಕರೆತಂದಿದೆ. ಎಲ್ಲರೂ ಸ್ನೇಹದಿಂದ ಆರಾಮವಾಗಿ ತಲುಪಿದ್ದೀರಲ್ಲವೇ? ಯಾರು ಕರೆತಂದರು? ರೈಲು ಕರೆತಂದಿದೆ ಅಥವಾ ಸ್ನೇಹವು ಕರೆತಂದಿತೇ? ಎಲ್ಲಿ ಸ್ನೇಹವಿದೆಯೋ ಅಲ್ಲಿ ಪರಿಶ್ರಮವೂ ಪರಿಶ್ರಮವೆನಿಸುವುದಿಲ್ಲ. ಕಷ್ಟವೂ ಕಷ್ಟವೆನಿಸುವುದಿಲ್ಲ. ಈ ಮೂರು ಹೆಜ್ಜೆಗಳ ಬದಲು ಎರಡು ಹೆಜ್ಜೆಗಳ ಪೃಥ್ವಿ ಸಿಕ್ಕರೆ ಏನೆನಿಸುತ್ತದೆ? ಸತ್ಯಯುಗದ ಮಂಚಕ್ಕಿಂತಲೂ ಶ್ರೇಷ್ಠವಾಗಿದೆ. ಎಲ್ಲರೂ ಆರಾಮದಿಂದ ಇದ್ದೀರಾ ಅಥವಾ ಏನು ಮಾಡುವುದು. ಇರಲೇಬೇಕು ಎಂಬ ವಿವಶತೆಯಿಂದ ಇದ್ದೀರಾ? ಭಕ್ತಿಮಾರ್ಗದಲ್ಲಂತೂ ಹೆಜ್ಜೆಯನ್ನಿಡಲೂ ಸಹ ಬಹಳ ಕಷ್ಟ ಪಡುತ್ತಾರೆ, ತಮಗೆ ಮಲಗುವುದಕ್ಕಾಗಿ ಮೂರು ಹೆಜ್ಜೆಯಷ್ಟು ಇಲ್ಲದಿದ್ದರೆ ಎರಡು ಹೆಜ್ಜೆಯಂತೂ ಸಿಗುತ್ತದೆ. ತಾವು ಚರಣಗಳಲ್ಲಿ ಸ್ಥಾನ ಕೊಡಿ ಎಂದು ಬೇಡಿಕೊಳ್ಳುತ್ತಿದ್ದಿರಿ ಆದರೆ ತಂದೆಯವರು ಚರಣಗಳಿಗೆ ಬದಲಾಗಿ ಪಟ್ಟದ ರಾಣಿಯರನ್ನಾಗಿ ಮಾಡಿಕೊಂಡಿದ್ದಾರೆ. ಆದರೂ ಸಹ ಮಧುಬನದ ಅಂಗಳವಿದೆಯಲ್ಲವೆ. ಭಲೆ ಎಲ್ಲಿಯೇ ಮಲಗಬಹುದು ಆದರೆ ಇರುವುದಂತೂ ಮಧುಬನದ ಅಂಗಳದಲ್ಲಿ ತಂದೆಗೆ ಇಷ್ಟು ಸಮೀಪಕ್ಕೆ ಬರುವ ಅಧಿಕಾರ ಸಿಗುತ್ತದೆ ಎಂಬುದು ಸ್ವಪ್ನದಲ್ಲಿಯೂ ಇರಲಿಲ್ಲ. ಹಾಗಾದರೆ ಎಲ್ಲರೂ ಖುಷಿಯಾಗಿ ಇದ್ದೀರಲ್ಲವೇ? ಎರಡು ಹೆಜ್ಜೆಗಳ ಬದಲು ಒಂದು ಹೆಜ್ಜೆಯಷ್ಟು ಸಿಕ್ಕರೂ ಖುಷಿಯಾಗಿ ಇರುತ್ತೀರಾ? ಕುಳಿತು-ಕುಳಿತಲ್ಲಿಯೇ ಮಲಗುವಿರಾ! ಕೆಲವರಿಗೆ ಕುಳಿತಲ್ಲಿಯೇ ಬಹಳ ಚೆನ್ನಾಗಿ ನಿದ್ರೆ ಬರುತ್ತದೆ. ಮಲಗಿದಾಗ ಬರುವುದಿಲ್ಲ. ಯೋಗದಲ್ಲಿ ಕುಳಿತುಕೊಂಡ ಕೂಡಲೇ ನಿದ್ರೆ ಆರಂಭವಾಗುತ್ತದೆ. ಐದು ದಿನಗಳ ಅಖಂಡ ತಪಸ್ಸು ಮಾಡಬೇಕಾಗುತ್ತದೆ. ಅದಕ್ಕೆ ಎಲ್ಲರೂ ತಯಾರಿದ್ದೀರಾ? ಊಟ ಸಿಗದಿದ್ದರೂ ನಡೆಯುತ್ತದೆಯೇ? ಅಥವಾ ಇದಾಗುವುದಿಲ್ಲ ಎಂದು ತಿಳಿಯುವಿರಾ? ಯಾವ ವಸ್ತು ಅಲ್ಲಿ ಸೇವನೆ ಮಾಡುವುದಿಲ್ಲವೋ ಅವು ಇನ್ನಷ್ಟು ಮಧುಬನದಲ್ಲಿಯೇ ಸಿಗುತ್ತದೆ ಆದರೆ ಎವರೆಡಿ ಆಗಿರಬೇಕು. ಸಿಕ್ಕರೆ ಬಹಳ

ಒಳ್ಳೆಯದು, ಸಿಗದಿದ್ದರೂ ಬಹಳ- ಬಹಳ ಒಳ್ಳೆಯದು ಏಕೆಂದರೆ ಎಲ್ಲರಿಗೂ ಅಮೃತವೇಳೆ ದಿಲ್‌ಖುಷ್ ಮಿಠಾಯಿಯಂತು ಸಿಗುತ್ತದೆ. ಮತ್ತು ಇಡೀ ದಿನ ಖುಷಿಯ ಔಷಧಿಯೂ ಸಿಗುತ್ತದೆ. ಆದ್ದರಿಂದ ನಡೆಯಬಹುದಲ್ಲವೇ? ಇದನ್ನೂ ಮಾಡಿ ನೋಡುತ್ತೇವೆ ಒಳ್ಳೆಯದು-

**ನಾಲ್ಕೂ ಕಡೆಯಲ್ಲಿರುವ ಸರ್ವ ಶ್ರೇಷ್ಠ ಭಾಗ್ಯಶಾಲಿ ಆತ್ಮರಿಗೆ, ಸದಾ ಸರ್ವ ಪ್ರಾಪ್ತಿಗಳ ಅನುಭೂತಿಗಳಲ್ಲಿ ಸಮಾವೇಶವಾಗಿರುವ ಶ್ರೇಷ್ಠ ಆತ್ಮರಿಗೆ, ಸದಾ ಪರಿಶೀಲಿಸುವ, ನಿರ್ಣಯಿಸುವ ಶಕ್ತಿಯನ್ನು ತೀವ್ರವಾಗಿ ಮಾಡಿಕೊಳ್ಳುವಂತಹ ಸಮೀಪ ಆತ್ಮರಿಗೆ, ಸದಾ ಸೇವೆಯಲ್ಲಿ ಸಮರ್ಥರಾಗಿ ಅನ್ಯರನ್ನೂ ಸಮರ್ಥರನ್ನಾಗಿ ಮಾಡುವಂತಹ ನಿಮಿತ್ತ ಆತ್ಮರಿಗೆ, ಸದಾ ಅತೀತ ಹಾಗೂ ಪ್ರಿಯ ಎರಡರ ಸಮತೋಲನವನ್ನು ಇಡುವ ಆಶೀರ್ವಾದಗಳಿಗೆ ಪಾತ್ರರಾಗಿರುವ ಆತ್ಮರಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

ಟೀಚರ್ಸ್(ನಿಮಿತ್ತ ಶಿಕ್ಷಕಿಯರು)ನೊಂದಿಗೆ:- ಹೇಗೆ ಟೀಚರ್ಸ್ ಎಂಬ ಬಿರುದಿದೆ. ಬಿರುದಿನಂತೆ ವಿಶೇಷವಾಗಿ ಬೇಹದ್ದಿನ ವೈರಾಗ್ಯ ವೃತ್ತಿಯ ವಾಯುಮಂಡಲ ಮಾಡುವುದರಲ್ಲಿ ಟೈಟ್ ಆಗಿರುವುದು. ಹಗುರವಾಗಬಾರದು ಏಕೆಂದರೆ ನಿಮಿತ್ತ ಟೀಚರ್ಸ್‌ನ ವಾಯುಮಂಡಲವು ಅನೇಕರವರೆಗೆ ತಲುಪುತ್ತದೆ. ಹಾಗಾದರೆ ಈಗ ಟೀಚರ್ಸ್ ಈ ಚಮತ್ಕಾರವನ್ನು ಮಾಡಿತೋರಿಸಿರಿ. ಹೇಗೆ ಪರಿವರ್ತನೆಯಲ್ಲಿ ಆಜ್ಞಾಕಾರಿಗಳಂತು ಆಗಿದ್ದೀರಿ. ಆಜ್ಞಾಕಾರಿಗಳಾಗುವ, ಹಾಂಜಿ ಮಾಡುವ ಒಂದು ಪಾಠವನ್ನಂತು ಪರಿಪಕ್ವ ಮಾಡಿಕೊಂಡಿದ್ದೀರಿ ಆದರೆ ಇನ್ನೊಂದು ಬೇಹದ್ದಿನ ವೈರಾಗ್ಯ ವೃತ್ತಿಯ ಪಾಠವನ್ನೀಗ ಪರಿಪಕ್ವವಾಗಿ ಮಾಡಿತೋರಿಸಿರಿ. ಏಕೆಂದರೆ ನಿಮಿತ್ತರಲ್ಲವೆ ಆದ್ದರಿಂದ ನಿಮಿತ್ತವಾಗಿರುವ ಆತ್ಮರೇ ನಿರಹಂಕಾರಿಗಳಾಗಿ ನಿರ್ಮಾಣದ ಕರ್ತವ್ಯವನ್ನು ಸಹಜವಾಗಿಯೇ ಮಾಡಬಹುದು. ಈಗ ಈ ವರ್ಷವಂತು ಪೂರ್ಣವಾಗುತ್ತಿದೆ ಆದರೆ ಹೊಸ ವರ್ಷದಲ್ಲಿ ಈ ನವೀನತೆಯ ಜಲಕ್ ಬಾಪ್ದಾದಾರವರೂ ನೋಡುವರು. ಸೇವೆ ಮಾಡಿದಿರಿ, ಸೇವಾಕೇಂದ್ರವನ್ನು ತೆರೆಯಲಾಯಿತು. ಬಹಳ ವೃದ್ಧಿ ಮಾಡಿದಿರಿ. ಮುಖ್ಯವಾದ ವ್ಯಕ್ತಿಗಳೂ ಬಂದರು. ಅತಿಮುಖ್ಯವಾದವರೂ ಬಂದುಬಿಟ್ಟರು, ಇದಂತು ಆಗುತ್ತಿರುತ್ತದೆ ಆದರೆ ಸೇವೆಯಲ್ಲಿ ಬೇಹದ್ದಿನ - ವೈರಾಗ್ಯ ವೃತ್ತಿಯು ಅನ್ಯ ಅತ್ಮರನ್ನು ಇನ್ನಷ್ಟು ಸಮೀಪಕ್ಕೆ ಕರೆತರುತ್ತದೆ. ಮುಖದ ಸೇವೆಯು ಸಂಪರ್ಕದಲ್ಲಿ ಕರೆತರುತ್ತದೆ ಮತ್ತು ವೃತ್ತಿಯಿಂದ ವಾಯುಮಂಡಲದ ಸೇವೆಯು ಸಮೀಪದಲ್ಲಿ ಕರೆತರುತ್ತದೆ. ತಿಳಿಯಿತೆ? ಬಾಪ್‌ದಾದಾರವರಂತು ಚಾರ್ಟ್ ನೋಡುತ್ತಿರುತ್ತಾರೆ ಅಲ್ಲವೇ? ಆದರೂ ಸೇವೆಗಾಗಿ ನಿಮಿತ್ತರಾಗಿದ್ದೀರಿ- ಈ ಶ್ರೇಷ್ಠ ಭಾಗ್ಯವೇನೂ ಕಡಿಮೆಯಲ್ಲ! ಇದೂ ಸಹ ವಿಶೇಷವಾದ ಆಸ್ತಿಯಾಗಿದೆ ಅಂದಮೇಲೆ ಈ ವಿಶೇಷ ಆಸ್ತಿಯ - ಭಾಗ್ಯದ ಅಧಿಕಾರಿಗಳಾಗಿದ್ದೀರಿ. ತಿಳಿಯಿತೆ? ಒಳ್ಳೆಯದು-

ಡಬಲ್ ವಿದೇಶಿ:- (ಎಲ್ಲಾ ಸ್ಥಾನಗಳಿಂದ ತಲುಪಿದ್ದಾರೆ) ಡಬಲ್ ವಿದೇಶಿಗಳು ಬುದ್ಧಿವಂತರಾಗಿದ್ದಾರೆ. ಹೇಗೆ ಎಲ್ಲಾ ದೇಶದ ಅಂಬಾಸಿಡನ್ನು ಕಳುಹಿಸುತ್ತಾರಲ್ಲವೆ ಹಾಗೆಯೇ ಅಂತರಾಷ್ಟ್ರೀಯ ಬ್ರಾಹ್ಮಣ ಪರಿವಾರವಾಗಿಬಿಟ್ಟಿತು. ಅಲ್ಲವೆ. ಡಬಲ್ ವಿದೇಶಿಗಳ ವಿಶೇಷತೆಯೇನೆಂದರೆ- ಸದಾ ಕೈಯಲ್ಲಿ ಕೈಯಿರುವುದು ಮತ್ತು ಜೊತೆಯಿರುವುದು. ಕೈಯಲ್ಲಿ ಕೈ ಇರುವುದು ವಿದೇಶದ ಫ್ಯಾಷನ್ ಆಗಿದೆ ಅಂದಮೇಲೆ ಈಗ ಯಾರ ಕೈಯಲ್ಲಿದ್ದೀರಿ? ತಂದೆಯವರ ಕೈಯಲ್ಲಿ ಸದಾ ತಂದೆಯವರ ಕೈಯಲ್ಲಿ ಕೈ ಸೇರಿಸುತ್ತಾ ಮುಂದೆ ಸಾಗುವವರು. ಕೈ ಆಗಿದೆ ಶ್ರೀಮತ ಅಂದಮೇಲೆ ಶ್ರೀಮತದ ಕೈ ಸದಾ ತಮ್ಮ ಕೈಯಲ್ಲಿ ಇರಲಿ.

ಪರಿಪಕ್ವವಾಗಿ ಇದ್ದೀರಾ ಅಥವಾ ಕೆಲವೊಮ್ಮೆ ಸುಸ್ತಾಗಿ ಬಿಟ್ಟುಬಿಡುತ್ತೀರಾ? ಕೆಲವೊಮ್ಮೆ ಕೈ ಬಿಟ್ಟುಹೋಗುತ್ತದೆಯೇ? ಮಾಯೆಯು ಬಿಡಿಸಿಬಿಟ್ಟರೆ? ಬಿಡುವುದಿಲ್ಲವೇ? ಹಾಗಾದರೆ ಸದಾ ಜೊತೆಯಲ್ಲಿರುವವರು ಮತ್ತು ಸದಾ ಶ್ರೀಮತದ ಕೈಯಲ್ಲಿ ಕೈ ಸೇರಿಸಿ ನಡೆಯುವವರು. ಯಾರ ಸಂಗಾತಿ ತಂದೆಯಾಗಿದ್ದಾರೆ. ಯಾರ ಕೈ ತಂದೆಯ ಕೈಯಲ್ಲಿದೆಯೋ ಅವರು ಸದಾಕಾಲವೂ ನಿಶ್ಚಿಂತ, ನಿಶ್ಚಿಂತ ಚಕ್ರವರ್ತಿಯಾಗಿರುತ್ತಾರೆ ಏಕೆಂದರೆ ಕೈ(ಸಂಗಾತಿ) ಹಾಗೂ ಜೊತೆ(ಸಂಗ) ಎರಡೂ ಶಕ್ತಿಶಾಲಿಯಾಗಿದೆ. ಸರಿಯಲ್ಲವೇ? ನೈರೋಬಿಯಾದವರು, ಪರಿಪಕ್ವವಾಗಿ ಕೈ ಹಾಗೂ ಜೊತೆಯಿದೆಯಲ್ಲವೇ? ಭಲೆ ಇಡೀ ಪ್ರಪಂಚದ ಅಕ್ಷೋಣಿ ಜನರು ಕೈ ಬಿಡಿಸಿದರೂ ಬಿಡುತ್ತೀರಾ? ಆ ಅಕ್ಷೋಣಿಯು ಶಕ್ತಿಹೀನವಾಗಿದ್ದಾರೆ ಮತ್ತು ತಾವೊಬ್ಬರು ಮಾಸ್ಟರ್ ಸರ್ವಶಕ್ತಿವಂತರಾಗಿದ್ದೀರಿ ಆದ್ದರಿಂದ ಡಬಲ್ ವಿದೇಶಿಗಳಲ್ಲಿ ನಶೆಯಿದೆ- ಬಾಪ್‌ದಾದಾರವರ ವಿಶೇಷ ಸಂಗ ಹಾಗೂ ಜೊತೆಯಿದೆ. ಲಿಫ್ಟ್ ಇದೆ. ಒಳ್ಳೆಯದು-

ರಿವೈಸ್ ಕೋರ್ಸ್ 05-12-1994.

***ವರ್ತಮಾನ ಸಮಯದ ಅವಶ್ಯಕತೆ- ಬೇಹದ್ದಿನ ವೈರಾಗ್ಯ ವೃತ್ತಿಯ ವಾಯುಮಂಡಲವನ್ನು ತಯಾರು ಮಾಡುವುದು.***

ಸಮಯದ ಸಮೀಪತೆಯ ಆಧಾರವಾಗಿದೆ ಬೇಹದ್ದೀನ ವೈರಾಗ್ಯ ವೃತ್ತಿ, ಬಾಪ್‌ದಾದಾರವರು ಬೇಹದ್ದಿನ ವೈರಾಗ್ಯ ವೃತ್ತಿಗೆ ಬದಲಾಗಿ ಹೊಸ ಹೊಸ ಪ್ರಕಾರದ ಚಿಕ್ಕ ಚಿಕ್ಕ ಸೆಳೆತಗಳ ವಿಸ್ತಾರವು ಬಹಳಷ್ಟು ದೊಡ್ಡದಾಗಿದೆ. ಈ ವಿಸ್ತಾರವೇ ಸಾರವನ್ನು ಗುಪ್ತ ಮಾಡಿದೆ ಎಂಬುದನ್ನು ಪರಿಶೀಲಿಸಿದರು. ನನ್ನದೆಂಬ ಭಾವದ ವೈರಾಗ್ಯವೇ ಬೇಹದ್ದಿನ ವೈರಾಗ್ಯವಾಗಿದೆ. ಹೊಸ ಹೊಸ ಪ್ರಕಾರದ ನನ್ನತನವು ಇನ್ನೂ ಎಮರ್ಜ್ ಆಗುತ್ತಿದೆ. ಆದ್ದರಿಂದ ಸಮಯದ ಸಮೀಪತೆಯು ಪ್ರತ್ಯಕ್ಷ ರೂಪದಲ್ಲಿ ಬರುತ್ತಿಲ್ಲ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸದಾ ಪ್ರಾಪ್ತಿಯ ಅನುಭೂತಿಯ ಸಾಗರದಲ್ಲಿ ಸಮಾವೇಶವಾಗಿದ್ದು ಸರ್ವ ವಿಧವಾದ ಮಾಯೆಯಿಂದ ಸುರಕ್ಷಿತವಾಗಿದ್ದೇನೆ. ಅರ್ಥಾತ್ ಸಾಗರನ ಸಮಾನ ಬೇಹದ್ದಿನ ಪ್ರಾಪ್ತಿ ಸ್ವರೂಪವಾಗಿ ಕರ್ಮದಲ್ಲಿ ಬರುತ್ತಿದ್ದೇನೆ.

2. ನಾನು ಸರ್ವಾತ್ಮರ ಸಂಪರ್ಕದಲ್ಲಿ ಬರಬೇಕಾದರೂ, ಸರ್ವ ಸಾಧನಗಳ ಸಂಬಂಧದಲ್ಲಿ ಬಂದರೂ, ಸೇವೆಯ ಅವಕಾಶ ಲಭಿಸಿದರೂ ಸರ್ವ ಸಂಬಂಧಗಳ ಸಂಪರ್ಕಗಳಲ್ಲಿ ಅತೀತ ಮತ್ತು ಪ್ರಿಯವಾಗಿದ್ದೇನೆ.

3. ನಾನು "ಏನು ಸಿಕ್ಕಿದೆಯೋ, ಹೇಗೆ ಸಿಕ್ಕಿದೆಯೋ, ಎಲ್ಲಿ ಕೂರಿಸುವರೋ, ಏನನ್ನು ಸೇವನೆ ಮಾಡಿಸುವರೋ, ಏನು ಮಾಡಿಸುವರೋ, ಅದನ್ನೇ ಮಾಡುತ್ತೇನೆ" ಎಂಬ ಮೊಟ್ಟ ಮೊದಲ ಪ್ರತಿಜ್ಞೆಯ ಪ್ರತ್ಯಕ್ಷ ಸ್ವರೂಪ.

4. ನಾನು ಸ್ವಯಂಗಾಗಿ ನ್ಯಾಯಾಧೀಶನಾಗಿದ್ದೇನೆ.

5. "ಸ್ವ ಪರಿವರ್ತನೆಯಿಂದ ವಿಶ್ವ ಪರಿವರ್ತನೆ" ಯಾಗುತ್ತದೆ ಆದ ಕಾರಣ ನಾನು ಮೊದಲು ಸ್ವಯಂಅನ್ನು ಪರಿವರ್ತಿಸಿಕೊಂಡಿದ್ದೇನೆ.

6. ನಾನು ಬೇಹದ್ ವೈರಾಗ್ಯವೃತ್ತಿಯ ವಾಯುಮಂಡಲವನ್ನು ತಯಾರು ಮಾಡುವ ಬೇಹದ್ ವೈರಾಗಿ.

7. ನನ್ನ ಬೇಹದ್ ವೈರಾಗ್ಯವೃತ್ತಿಯ ತರಂಗಗಳು ಸರ್ವಾತ್ಮರ ಹೃದಯದವರೆಗೆ ತಲುಪುತ್ತಿವೆ.